# ಹಾಡು ಮುಗಿಯಿತು..

**ಕಬೀರ ಮನದ 'ಗೋವಾ' ಬದುಕಿನ ನಾಟಕ ಮುಗಿಸಿ ನೇಪಥ್ಯಕ್ಕೆ ಮರಳಿದ್ದಾರೆ. ಆದರೆ ಅವರ ನೆನಪು ಬೇಗಕ್ಕೆ ಮಾಸುವುದಿಲ್ಲ.**

**■ ದಿಲಾವರ್ ರಾಮದುರ್ಗ**



ಚಿತ್ರ: ಪ್ರಕಾಶ್ ಹೆಗಡೆ

**ಗೋ**ಪಾಲ ವಾಜಪೇಯಿ ಕನ್ನಡ ರಂಗಭೂಮಿ ಮತ್ತು ಸಿನಿಮಾದಲ್ಲಿ ಪರಿಚಿತ ಹೆಸರು. 'ದೊಡ್ಡಪ್ಪ' ನಾಟಕದಿಂದ ರಂಗಸಾಹಿತ್ಯಕ್ಕೆ ಎಂಟ್ರೀ ಕೊಟ್ಟವರು. ರಂಗಾಸಕ್ತರೊಂದಿಗೆ ಥೇಟ್ ದೊಡ್ಡಪ್ಪನ ಗೆಟಪ್‌ನಲ್ಲಿ ಅಕ್ಕರೆಯಿಂದ ವರ್ತಿಸುವ ವ್ಯಕ್ತಿ. ಆಪ್ತ ಬಳಗದಲ್ಲಿ ಗೋವಾ ಎಂದೇ ಹೆಸರಾದವರು. ಇದು ಅವರ ಪೂರ್ತಿ ಹೆಸರಿನ ಹ್ರಸ್ವರೂಪ ಮತ್ತು ಕಾವ್ಯನಾಮಗಳಲ್ಲೊಂದು (ವೃಷಭೇಂದ್ರಯ್ಯ, ಗೋಪಾಲ ಯಾಗ್ನಿಕ್ ಇತರ ಕಾವ್ಯನಾಮಗಳು). 'ಚಿತ್ರನಟ ಶಂಕರನಾಗ್‌ಗೆ ತುಂಬಾ ಇಷ್ಟವಾದ ಹೆಸರಿದು. ಟಿಂಗ್ ಟಾಂಗ್ ಲಯದಲ್ಲಿ ಅವರು ನನ್ನನ್ನು ಗೋವಾ ಎಂದು ಕರೆಯುತ್ತಿದ್ದುದೇ ಒಂದು ಸೊಗಸು' ಎಂದು ವಾಜಪೇಯಿ ತಮ್ಮ 'ರಂಗದ ಒಳ ಹೊರಗೆ' ಕೃತಿಯಲ್ಲಿ ಸ್ಮರಿಸಿದ್ದಾರೆ.

ಗದಗ ಜಿಲ್ಲೆ ಲಕ್ಷ್ಮೇಶ್ವರದ ಈ ಬಹುಮುಖ ಪ್ರತಿಭೆ ಹೆಸರು ಮಾಡಿದ್ದು ರಂಗಭೂಮಿ ಮತ್ತು ಸಿನಿಮಾ ರಂಗದಲ್ಲಿ. ಪತ್ರಿಕೋದ್ಯಮವೇ ಎಲ್ಲದಕ್ಕೂ ಆಸರೆಯಾಗಿದ್ದರೂ ಪ್ರವೃತ್ತಿ ಇವರನ್ನು ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದು ಸುಳ್ಳಲ್ಲ. 'ಸಂಯುಕ್ತ ಕರ್ನಾಟಕ'ದಿಂದ ಪತ್ರಿಕಾ ಬದುಕು ಆರಂಭಗೊಂಡಿದ್ದು. ಅದೇ ಸಂಸ್ಥೆಯ 'ಕರ್ಮವೀರ' ವಾರಪತ್ರಿಕೆ ಮತ್ತು 'ಕಸ್ತೂರಿ' ಮಾಸ ಪತ್ರಿಕೆಯಲ್ಲಿ ಸಹಾಯಕ ಸಂಪಾದಕರಾಗಿ ಮೂರು ದಶಕಗಳ ಇವರ ಸೇವೆ ಅನನ್ಯ ಎಂದು ಆಪ್ತ ಒಡನಾಡಿಗಳು ನೆನೆಯುತ್ತಾರೆ. ಈ ಟಿವಿ ವಾಹಿನಿಯಲ್ಲಿ ಸಾಹಿತ್ಯ ಸಂಯೋಜಕರಾಗಿಯೂ ಕೆಲಸ ಮಾಡಿದ್ದರು.

ಹೆಸರಾಂತ ನಾಟಕಕಾರ ಭೀಷ್ಮ ಸಹಾನಿ ಅವರ 'ಕಬೀರ ಖಡಾ ಬಾಜಾರ ಮೇ' ಎನ್ನುವ ಹಿಂದಿ ನಾಟಕವನ್ನು ಗೋಪಾಲ ವಾಜಪೇಯಿ ಕನ್ನಡದಲ್ಲಿ 'ಸಂತ್ಯಾಗ ನಿಂತಾನ ಕಬೀರ' ಎಂದು ಅನುವಾದಿಸಿದರು. ಕಬೀರನ ದೋಹಾಗಳು, ಗೋವಾ ಸಾಹಿತ್ಯ ರಂಗಾಸಕ್ತರನ್ನು ಬಲುಬೇಗ ಸೆಳೆದವು.

ಕನ್ನಡದ ಮತ್ತೊಂದು ಪ್ರಸಿದ್ಧ ನಾಟಕ 'ನಾಗಮಂಡಲ'. ಹೆಸರಾಂತ ನಾಟಕಕಾರ ಗಿರೀಶ ಕಾರ್ನಾಡ ರಚಿಸಿದ ಜಾನಪದ ಕಥಾವಸ್ತುವಿನ 'ನಾಗಮಂಡಲ' 80ರ ದಶಕದಲ್ಲಿ ಚಿತ್ರನಟ ಶಂಕರನಾಗ್ ಮತ್ತವರ ಸ್ನೇಹಿತರ ಮೂಲಕ ಭರ್ಜರಿಯಾಗಿ ಪ್ರಯೋಗಕ್ಕೊಳಗಾಯಿತು. ಅದಕ್ಕೆಂದೇ ಗೋವಾ ಕೆಲವು ಹಾಡುಗಳನ್ನು ಕೂಡ ರಚಿಸಿದರು. ಅವರ ಗೀತಸಾಹಿತ್ಯ ಇಡೀ ನಾಟಕಕ್ಕೆ ಸಂಗೀತದ ನಾದ ತುಂಬಿತು. ಈಗಲೂ ಆ ಹಾಡುಗಳನ್ನು ರಂಗಾಸಕ್ತರು ಗುನು ಗುನಿಸುತ್ತಾರೆ. ಅಂತೆಯೇ 'ಸಂತ್ಯಾಗ ನಿಂತಾನ ಕಬೀರ' ನಾಟಕದ ಹಾಡುಗಳು.

ಶಂಕರನಾಗ್ ಈ ನಾಟಕವನ್ನು ಸಿನಿಮಾ ಆಗಿಸುವ ಕನಸು ಕಟ್ಟಿಕೊಂಡಿದ್ದರು. ಕಾರ್ನಾಡ್ ಮತ್ತು ಶಂಕರನಾಗ್ ಜೋಡಿಯಲ್ಲಿ ಈ ಸಿನಿಮಾ ಬೆಳ್ಳಿಪರದೆ ಮೇಲೆ 80ರ ದಶಕದಲ್ಲೇ ರಾರಾಜಿಸಬೇಕಿತ್ತು. ಶಂಕರನಾಗ್ ಅಕಾಲಿಕ ಸಾವಿನಿಂದ ಸೆಟ್ಟೇರಲಿಲ್ಲ. 90ರ ದಶಕದಲ್ಲಿ ನಾಗಾಭರಣರಿಂದ ಸಿನಿಮಾ ಆಯಿತು. ಗೋವಾ ಅವರದೇ ಸಾಹಿತ್ಯ. ಆ ಹಾಡುಗಳು ಈಗಲೂ ಜನಪ್ರಿಯ.

ಮಾಯಾದೋ ಮನದ ಭಾರ, ತಗಧಾಂಗ ಎಲ್ಲ ದ್ವಾರ
ಏನ ಏನಿದು ಎಂಥಾ ಬೆರಗ!

ಈ ಹಾಡನ್ನು ರಸಿಕರು ಮರೆಯಬಹುದೇ? ನಾಗಮಂಡಲ ಸಿನಿಮಾದಲ್ಲಿ ಪ್ರಕಾಶ ರೈ ಅಭಿನಯದ ಜೊತೆ ನೆನಪಲ್ಲಿ ಬಹುಕಾಲ ನಿಲ್ಲಬಲ್ಲ ಅಂಶವೆಂದರೆ ಗೋವಾ ಅವರ ಒಂದೊಂದು ಹಾಡು, ಅಶ್ವತ್ ಅವರ ಇಂಪಾದ ಸಂಗೀತ.

ಅವರ ಸಾಹಿತ್ಯದೊಳಗೆ ಲಕ್ಷ್ಮೇಶ್ವರ, ಗದುಗಿನ ನೆಲದ ಸೊಗಡಿನ ಉತ್ತರ ಕರ್ನಾಟಕದ ಜವಾರಿ ಭಾಷೆಯ ಲಾಲಿತ್ಯವಿತ್ತು. ಪ್ರತಿ ಹಾಡಿನ ಪದಗಳಲ್ಲಿ ಗಿಣಿ ಕಚ್ಚಿದ ಹಣ್ಣಿನಂಥ ರುಚಿ. ತುಂಬ ಸಮಯ ಬಾಯಲ್ಲುಳಿವ ಸವಿ. ಅವರ ಮಾತಿನೊಳಗೂ ಇಂಥದೇ ರುಚಿಕಟ್ಟಿತ್ತು. ಅವರ ಜೊತೆ ಮಾತನಾಡುವಾಗೆಲ್ಲ ಜವಾರಿ ಬಾಷೆಯ ನುಡಿಗಟ್ಟುಗಳು ಸಹಜವಾಗಿಯೇ ಸುಳಿದಾಡುತ್ತಿದ್ದವು.

ನಾಟಕದ ಮಾತುಗಳೆಂದರೆ ವಿಷಯದ ಜೊತೆ ನಾಟಕೀಯ ಗುಣವೂ ಇರಬೇಕಲ್ಲ. ಅದನ್ನವರು ಸೊಗಸಾಗಿ ಕಟ್ಟಿಕೊಡಬಲ್ಲವರಾಗಿದ್ದರು. ಭಾಷಾ ಲಯವನ್ನು ಅವರು ಆಡು ಭಾಷೆಯಿಂದಲೇ ದಕ್ಕಿಸಿಕೊಂಡಂತಿತ್ತು. ನಾಟಕ ಸಾಹಿತ್ಯಕ್ಕೆ ಕಾವ್ಯದ ಶಕ್ತಿಯನ್ನೇ ಬಳಸಿಕೊಂಡರು. ಕಾವ್ಯ ತನ್ನೊಳಗಿಟ್ಟುಕೊಂಡ ರಹಸ್ಯಗಳ ಸುಳಿವನ್ನು ಮೆಲ್ಲ ಮತ್ತು ಸೂಕ್ಷ್ಮವಾಗಿ ಬಿಟ್ಟುಕೊಡುವಂತೆ ಅವರ ನಾಟಕದ ಮಾತುಗಳು. ಇದರಿಂದ ಅವರ ನಾಟಕದ ಕಥನ ಕಾವ್ಯಮಯ.

'ಸಂತ್ಯಾಗ ನಿಂತಾನ ಕಬೀರ' ನಾಟಕದಲ್ಲಿ ಅವರು ಬಳಸಿದ ಭಾಷೆ ಅನುಭಾವ ಜಗತ್ತನ್ನು ತನ್ನೊಳಕ್ಕೆ ಆವರಿಸಿಕೊಂಡಂತೆ ಅನಿಸುತ್ತದೆ. ಕಬೀರನ ಮೂಲ ದೋಹೆಗಳಲ್ಲಿನ ಲಯ, ಭಾವ ಮತ್ತು ಆಯಾ ಸ್ಥಳ, ಪರಿಸರ ಮತ್ತು ಕಾಲದ ನುಡಿಗಟ್ಟನ್ನು ಅದರದೇ ಕಸುವಿನ ಜೊತೆ ಕನ್ನಡದಲ್ಲಿ ಕಟ್ಟಿಕೊಡು ವುದು ಕೊಂಚ ಕಷ್ಟದ ಕೆಲಸವೇ. ಆದರೆ ಗೋವಾ ಅದನ್ನು ಅತ್ಯಂತ ಸುಲಭ ಮತ್ತು ಸುಲಲಿತವಾಗಿಸಿಕೊಂಡಿದ್ದರು. ಕಬೀರನ ಹಾಡುಗಳನ್ನು ಉತ್ತರ